**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ**

**ಸಿ.ಸಿ ನಂ. 1204/2020**

ದಿನಾಂಕಃ**. 22.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಚಾಸಾ**-1** ಪ್ರಾಸಾ**-1**

| | |
|---|---|
| ಹೆಸರು | - ಪುಟ್ಟಸ್ವಾಮಿ |
| ತಂದೆಯ ಹೆಸರು | - ನಿಂಗಯ್ಯ |
| ವಯಸ್ಸು | - **76** |
| ಉದ್ಯೋಗ | - ವ್ಯವಸಾಯ |
| ವಿಳಾಸ | - ಅರಕಟ್ಟೆದೊಡ್ಡಿ ಗ್ರಾಮ |

**ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-**

ಈ ಪ್ರಕರಣದ ಆರೋಪಿ ತಂದೆ ಕಾಳೇಗೌಡ ನನಗೆ ಪರಿಚಯ ಇಲ್ಲ. ಮೃತ ವ್ಯಕ್ತಿ ನನ್ನ ಮಗ. ಚಾ.ಸಾ. **4** ಬಾಮ್ಮೈದ, ಚಾ.ಸಾ **2 , 3 , 6** ರಿಂದ **10** ಗ್ರಾಮಸ್ಥರು. ಚಾ.ಸಾ. **11** ನನ್ನ ಹೆಂಡತಿ.

ಅಪಘಾತ ಯಾರ ತಪ್ಪಿನಿಂದ ಆಗಿದೆ ನನಗೆ ಗೊತ್ತಿಲ್ಲ. ಅಪಘಾತದ ಬಗ್ಗೆ ದೂರು ಕೊಡಲು ನಾನು ಠಾಣೆಗೆ ಹೋದಾಗ ಪೊಲೀಸರು ಬಿಳಿ ಹಾಳೆಗಳ ಮೇಲೆ ನನ್ನ ಹೆಬ್ಬೆಟ್ಟು ಗುರುತನ್ನು ಪಡೆದುಕೊಂಡಿದ್ದರು.

ಸಾಕ್ಷಿ ಒಂದು ದೂರನ್ನು ನೋಡಿ ಅದರಲ್ಲಿರುವ ಒಂದು ಹೆಬ್ಬೆಟ್ಟು ಗುರುತನ್ನು ನೋಡಿ ತನ್ನ ಹೆಬ್ಬೆಟ್ಟು ಗುರುತು ಎಂದು ಗುರುತಿಸಿದ್ದು, ಸದರಿ **ದೂರನ್ನು** ನಿಪಿ**-1** ಎಂದು ಗುರುತಿಸಲಾಯಿತು.

ಸಾಕ್ಷಿ ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಹೆಬ್ಬೆಟ್ಟು ಗುರುತನ್ನು ನೋಡಿ ತನ್ನ ಹೆಬ್ಬೆಟು ಎಂದು ಗುರುತಿಸಿದ್ದು, ಸದರಿ **ಪಂಚನಾಮೆಯನ್ನು** ನಿಪಿ**-2** ಎಂದು ಗುರುತಿಸಲಾಯಿತು.

ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿರುವುದಿಲ್ಲ ಮತ್ತು ಏನನ್ನು ವಶಪಡಿಸಿಕೊಂಡಿರುವುದಿಲ್ಲ.

ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>

ದಿ. **09.01.2019** ರಂದು ಸಂಜೆ **7.30** ಗಂಟೆ ಸಮಯದಲ್ಲಿ ಸಾತನೂರು ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ದಾಳಿಂಬ ಗ್ರಾಮದ ಶಿವಣ್ಣರವರ ಪರಂಗಿ ತೋಟದ ಮುಂದಿನ ಸಾತನೂರು -ಚನ್ನಪಟ್ಟಣ ಕಾರು ರಸ್ತೆಯಲ್ಲಿ ಆರೋಪಿ ಮಹೀಂದ್ರ ಟ್ರಾಕ್ಟರ್ ನಂಬರ್ ಕೆಎ **. 42 .** ಪಿ**. 6275** ಮತ್ತು ಟ್ರೇಲರ್ ನಂಬರ್ **8426276** ವಾಹನವನ್ನು ಸಾತನೂರು ಕಡೆಯಿಂದ ದಾಳಿಂಬ ಗ್ರಾಮದ ಕಡೆಗೆ ಅತಿವೇಗವಾಗಿ ಮತ್ತು ಅಜಾರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನನ್ನ ಮಗ ಚಲಾಯಿಸುತ್ತಿದ್ದ ಟಿ.ವಿ.ಎಸ್**,** ದ್ವಿ ಚಕ್ರ ವಾಹನದ ಸಂಖ್ಯೆಃ ಕೆಎ**.42.**ಕ್ಯೂ **.6486** ವಾಹನಕ್ಕೆ ಡಿಕ್ಕಿಪಡಿಸಿದ್ದ ಪರಿಣಾಮ ಅವನಿಗೆ ತೀವ್ರವಾಗಿ ರಕ್ತಗಾಯವಾಗಿದ್ದು ಸ್ಥಳದಲ್ಲಿಯೆಃ ಮೃತಪಟಪ್ಪಿದ್ದ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ನಿ.ಪಿ.**1** ರಂತೆ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ದಿ. **10.01.2019** ರಂದು ಸಂಜೆ **5.30** ರಿಂದ **6** ಗಂಟೆಯವರೆಗೆ ನನ್ನ ಹಾಗೂ ಚಾಸಾ-**3** ಮತ್ತು **4** ರವರ ಸಮಕ್ಷಮ ಪೊಲೀಸರು ನಿಪಿ- **2** ರ ಪ್ರಕಾರ ಪಂಚನಾಮೆ ಮಾಡಿ ಒಂದು ಟ್ರಾಕ್ಟರ್ ಮತ್ತು ಒಂದು ಟ್ರೇಲರ್ ವಶಪಡಿಸಿಕೊಂಡರು ಎಂದರೆ ಸರಿಯಲ್ಲ.

ಸಾಕ್ಷಿಗೆ ದಿಃ **18.01.2019** ರಂದು ಅವನು ಪೊಲೀಸರಿಗೆ ನೀಡಿದ ಎಂಬ ಹೇಳಿಕೆಯ ಭಾಗವಾದ "ನನ್ನ ಮಗ ಮುನಿನಿಂಗಪ್ಪ .......ಗುರುತಿಸುತ್ತೇನೆ", ಓದಿ ಹೇಳಿದಾಗ ಅಲ್ಲಗಳೆದಿದ್ದರಿಂದ ಸದರಿ ಹೇಳಿಕೆ ಭಾಗವನ್ನು **ನಿಪಿ- 3** ಎಂದು ಗುರುತಿಸಲಾಯಿತು.

ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ಶ್ರೀ. ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**